# ಕಲಬುರಗಿ ಜಿಲ್ಲೆಯ ಜನಪದ ವೈದ್ಯ

ಗ್ರಾಮೀಣರು ಎದುರುಗೊಂಡಾಗ ಪರಸ್ಪರ ಮಾತು ಆರಂಭವಾಗುವುದು ಆರಾಮಿದ್ದೀರ್ಯಾ ಎನ್ನುವ ಉಭಯ ಕುಶಲೋಪರಿಯಿಂದ. ಇಲ್ಲಿ ಅವರ ಆರೋಗ್ಯ ಚಿಂತನೆಯನ್ನು ಗಮನಿಸಬಹುದಾಗಿದೆ. ಜೀವಿಗಳಿಗೆ ಆಹಾರ ಎಷ್ಟು ಮುಖ್ಯವೊ ಆರೋಗ್ಯವೂ ಅಷ್ಟೇ ಮಹತ್ವದ್ದಾಗುತ್ತದೆ. ಅಂತೆಯೆ ಹುಟ್ಟಿದ ಪ್ರತಿ ಜೀವಿ ಆರೋಗ್ಯವೇ ಭಾಗ್ಯವೆಂಬುದನ್ನು ಅರಿತು ನಿರೋಗಿಯಾಗಿರಲು ಬಯಸುವುದು ಸಹಜ. ಆದರೂ ರೋಗಗಳು ಬಂದೇ ಬರುತ್ತವೆ. ಕೆಲವು ರೋಗಗಳಂತೂ ಜೀವಕ್ಕೇ ಅಪಾಯ ವಡ್ಡುವಂಥವಾಗಿರುತ್ತವೆ. ಹೀಗೆ ಬಂದ ರೋಗಗಳನ್ನು ಪರಿಹರಿಸಿಕೊಳ್ಳಲು ಮದ್ದು ಹುಡುಕಲು ತೊಡಗಿದ್ದೆ ಇಂದು ಅನೇಕ ವೈದ್ಯ ಪದ್ಧತಿಗಳು ಜಾರಿಯಲ್ಲಿವೆ. ಆಯುರ್ವೇದ, ಆಲೋಪತಿ, ಹೋಮಿಯೋಪತಿ, ಯುನಾನಿ ಮುಂತಾದವೆಲ್ಲ ವಿಶ್ವದಾದ್ಯಂತ ಪ್ರಚಲಿತದಲ್ಲಿವೆ. ಬಹುಷ: ಆರಂಭದಲ್ಲಿ ತನ್ನ ಸುತ್ತಮುತ್ತ ಸಿಗುವ ಗಿಡಮೂಲಿಕೆಗಳಿಂದ ರೋಗ ನಿವಾರಣೆಗೆ ಮದ್ದು ಕಂಡುಕೊಳ್ಳಲಾಯಿತು. ಹೀಗೆ ಪ್ರಯೋಗ ಮಾಡುತ್ತಲೇ ಇಂತಹ ರೋಗಕ್ಕೆ ಇಂಥ ಔಷಧಯೆಂದು ತೀರ್ಮಾನಕ್ಕೆ ಬರಲಾಯಿತು. ಈ ವಿಷಯದಲ್ಲಿ ಪರಿಣತಿ ಪಡೆದವನು ವೈದ್ಯನೆನಿಸಿಕೊಂಡನು. ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಇಂಥ ವೈದ್ಯರಿದ್ದು ತಮ್ಮ ಉಚಿತ ಸೇವೆಯ ಮೂಲಕ ಗ್ರಾಮಸ್ಥರ ಗೌರವಕ್ಕೆ ಪಾತ್ರರಾಗಿದ್ದಾರೆ.

ಬದುಕು ಶರವೇಗದಲ್ಲಿ ಬದಲಾಗುತ್ತಿದೆ. ವಿಜ್ಞಾನ ಶೋಧಗಳು ಕೂಡ ಭರದಿಂದಲೆ ಸಾಗಿವೆ. ಆದರೂ ಎಲ್ಲೋ ಏನನ್ನೋ ಕಳೆದುಕೊಂಡ ಭಾವ ಕಾಡುತ್ತಿದೆ. ಸಾಮಾಜಿಕ ಬದ್ಧತೆ, ಅಂತಕರಣ, ಸೇವಾ ಮನೋಭಾವದ ಕೊರತೆ ಎಲ್ಲವನ್ನು ದುಡ್ಡಿನಿಂದಲೆ ಅಳೆಯುವಂತೆ ಮಾಡಿದೆ. ಮನುಷ್ಯ ಬದುಕಿಗೆ ಬೆಲೆಯಿಲ್ಲದಂತಾಗಿದೆ. ಹಣದ ಮುಂದೆ ಯಾವುದೂ ಮುಖ್ಯವಾಗುತ್ತಿಲ್ಲ. ನಮ್ಮ ಹಳ್ಳಿಗಳಲ್ಲಿ ನೆರೆ ಹೊರೆಯವರಿಗೆ ತೊಂದರೆಯಾದರೆ ತಮ್ಮ ಕೆಲಸ ಕಾರ್ಯ ಬಿಟ್ಟು, ಜಾತಿಮತ ಲೆಕ್ಕಿಸದೆ ಅವರ ತುರ್ತು ಸ್ಥಿತಿಗೆ ಸ್ಪಂದಿಸುತ್ತಿದ್ದ ಜನರನ್ನು ನೋಡಿ ಬೆಳೆದವಳು ನಾನು. ಹೆರಿಗೆಯಲ್ಲಿ ತಾಯಿ ಸತ್ತು ಮಗು ಉಳಿದರೆ ತಮ್ಮ ಎದೆ ಹಾಲು ಕುಡಿಸಿ ಬೆಳೆಸಿದ ತಾಯಂದಿರು, ಮನೆಯವರು ಪರ ಊರಿಗೆ ಹೋದಾಗ ಆಕಸ್ಮಿಕ ಹೆರಿಗೆ ನೋವು (ಎಂಟನೇ ತಿಂಗಳಲ್ಲಿ) ಕಾಣಿಸಿಕೊಂಡ ಮಹಿಳೆಗೆ ಮನೆ ಮಾಲಿಕ ಮಹಿಳೆ ಆಸ್ಪತ್ರೆಗೆ ಕರೆದೊಯ್ದು ಹೆರಿಗೆಗೆ ಸಹಾಯ ಮಾಡಿದ್ದಲ್ಲದೆ ಬಾಣಂತಿ ಮಗುವಿನ ಆರೈಕೆಯನ್ನೂ ನೋಡಿಕೊಂಡದ್ದು, ಯಾರ ಮನೆಯಲ್ಲಿ ಹೆರಿಗೆಯಾದರೂ ಮಗು ಬಾಣಂತಿಗೆ ನೀರು ಹಾಕಿ ಬಾಣಂತಿ ಎಚ್ಚ ಮಾಡಿಕೊಟ್ಟು ಅಂಥಕರಣ ಮೆರೆಯುತ್ತಿದ್ದ ಹಿರಿಯ ಮಹಿಳೆಯರು, ಕಾಯಿಲೆ ಕಸಾಲೆಗೆ ಫಲಾಪೇಕ್ಷೆ ಇಲ್ಲದೆ ಔಷಧ ಕೊಡುತ್ತಿದ್ದ ನಾಟಿ ವೈದ್ಯರು ಗ್ರಾಮೀಣ ಬದುಕನ್ನು ಸಹ್ಯವಾಗಿಸಿದ್ದರು. ಆದರಿಂದು ಜಾಗತೀಕರಣ ಮನುಷ್ಯ ಸಂಬಂಧಗಳಿಗೆ ಬೆಲೆ ಇಲ್ಲದಂತೆ ಮಾಡಿ ಅಟ್ಟಹಾಸ ಮೆರೆಯುತ್ತಿದೆ. ದುಬಾರಿ ಬೆಲೆ ತೆತ್ತು ವಿದ್ಯ ಪಡೆದ ವೈದ್ಯರು ಹಣ ಗಳಿಕೆಯೊಂದಕ್ಕೇ ಮಹತ್ವವಿತ್ತ ಪರಿಣಾಮ ಬಡ ರೋಗಿಗಳ ಸ್ಥಿತಿ ಚಿಂತಾಜನಕವೆಂಬಂತಾಗಿದೆ. ಇಂಥವರಿಗೆ ನಾಟಿ ವೈದ್ಯ ವರದಾನವಾಗಿತ್ತು. ಇಂದಿಗೂ ಅನೇಕರು ಇದನ್ನು ಅನುಸರಿಸುತ್ತಿದ್ದಾರೆ. ಹಣ ಪಡೆದರೆ ಅಥವಾ ಔಷಧದ ಹೆಸರನ್ನು ಉಚ್ಚರಿಸಿದರೆ ಔಷಧ ನಾಟುವುದಿಲ್ಲವೆಂಬ ನಂಬುಗೆ ಗ್ರಾಮೀಣರಲ್ಲಿದೆ. ಹಾಗಾಗಿ ಅವರು ಇದನ್ನೆಂದೂ ಕಸುಬಾಗಿ ಭಾವಿಸಲಿಲ್ಲ. ಯಾವುದಾದರೂ ಒಂದು ಮುಖ್ಯ ಉದ್ಯೋಗವನ್ನು ಮಾಡುತ್ತ ವಾರದ ಕೊನೆಯಲ್ಲಿ ಸಾಮಾನ್ಯವಾಗಿ ರವಿವಾರ ಔಷಧ ಕೊಡುವ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದ್ದರು. ಅಡಿಗೆ ಮನೆ ಪದಾರ್ಥ ಮತ್ತು ನಾರು ಬೇರುಗಳನ್ನು ಬಳಸಿ ಔಷಧ ಕೊಡುತ್ತಿದ್ದರು. ಇದರಿಂದ ಯಾವುದೆ ಅಡ್ಡ ಪರಿಣಾಮಗಳಿರಲಿಲ್ಲ. ಹಣ ಕೊಡುವ ಅಥವಾ ತೆಗೆದುಕೊಳ್ಳುವ ವ್ಯವಹಾರವಿರಲಿಲ್ಲ. ಹೀಗಿದ್ದೂ ಇತ್ತೀಚೆಗೆ ಇವರು ಪದವೀಧರರಲ್ಲವೆಂಬ ಕಾರಣಕ್ಕೆ ಇವರನ್ನು ಚಿಕಿತ್ಸೆ ನೀಡದಂತೆ ನಿರ್ಬಂಧಿಸಲಾಗಿದೆ. ಪರಂಪರಾಗತ ಜ್ಞಾನ, ಮಾಡಿ ಕಲಿತದ್ದಾಗಿರುತ್ತದೆ. ಗುರು ಮುಖೇನ ಕಲಿತು ಪರಿಣತಿ ಪಡೆದದ್ದಾಗಿರುತ್ತದೆ. ಇದರಿಂದ ಯಾರಿಗೂ ಯಾವುದೆ ಹಾನಿ ಇರುವುದಿಲ್ಲ. ಔಷಧಗಳನ್ನು ಗುರುತಿಸಿ ಕೊಡುವುದನ್ನು ಖಚಿತ ಪಡಿಸಿಕೊಂಡ ಬಳಿಕವೇ ಕಲಿಸಿದ ಗುರು ವೈದ್ಯನಾಗಲು ಅನುಮತಿ ನೀಡುತ್ತಾನೆ.

ಕಲಬುರಗಿ ಜಿಲ್ಲೆಯಲ್ಲಿ ಇಂಥ ಸಾವಿರಾರು ಜನ ವೈದ್ಯರಿದ್ದಾರೆ. ಸಾಮಾನ್ಯವಾಗಿ ಇವರೆಲ್ಲ ಬಡವರು. ಇವರಲ್ಲಿ ಅನೇಕರಿಗೆ ಮನೆ ಇಲ್ಲ. ಚಿಕಿತ್ಸೆ ನೀಡಲು ಸರಿಯಾದ ಒಂದು ಸ್ಥಳವಿಲ್ಲ. ಇದು ಪರಂಪರಾಗತ ವೈದ್ಯ ಪದ್ಧತಿಯಾಗಿದ್ದು ಇದನ್ನು ಉಳಿಸಿಕೊಳ್ಳುವ ಅವಶ್ಯಕತೆ ಇದೆ. ಪ್ರತಿ ಹಳ್ಳಿಗೆ ಒಂದು ಔಷಧೀಯ ವನ ನಿರ್ಮಿಸಬೇಕು. ಒಂದು ವೈದ್ಯಭವನ ಒದಗಿಸಿದರೆ ಔಷಧಗಳನ್ನು ಸಂಗ್ರಹಿಸಿಟ್ಟುಕೊಂಡು ಚಿಕಿತ್ಸೆ ನೀಡಲು ಅನುಕೂಲವಾಗುತ್ತದೆ. ಎಷ್ಟೆಲ್ಲ ಆಧುನಿಕ ಆಸ್ಪತ್ರೆಗಳು ತಲೆ ಎತ್ತುತ್ತಿದ್ದರೂ ಕಾಮಣಿ, ಲಕ್ವ, ಅರ್ಧ ತಲೆ ನೋವು, ಸಂಧಿ ವಾತ, ಹಾವು ಕಡಿತ, ಕೀಲು ನೋವುಗಳಿಗೆ ಜನ ಇಂದಿಗೂ ಅವಲಂಬಿಸಿರುವುದು ನಾಟಿ ವೈದ್ಯರನ್ನೆ. ಹಾಗಾಗಿ ಇದಕ್ಕೆ ಚೈತನ್ಯ ತುಂಬಬೇಕಾದ ಅವಶ್ಯಕತೆ ಹಿಂದಿಗಿಂತ ಇಂದು ಹೆಚ್ಚಾಗಿದೆ. ಜಾನಪದ ವೈದ್ಯರಿಗೂ ಪ್ರಮಾಣಪತ್ರ ಬೇಕು ಎನ್ನುವುದಾದರೆ ಜಾನಪದ ವೈದ್ಯ ವಿಭಾಗದ ತಜ್ಞರಿಂದ ತರಬೇತಿ ಶಿಬಿರ ಏರ್ಪಡಿಸಿ ಪ್ರಮಾಣಪತ್ರ ವಿತರಿಸಬೇಕು. ಒಟ್ಟಾರೆ ಈ ಅಮೂಲ್ಯ ಜ್ಞಾನವನ್ನು ರಕ್ಷಿಸಿಕೊಳ್ಳಬೇಕಾದ ಜರೂರಿ ಇದೆ. ಜಾನಪದ ವೈದ್ಯರನ್ನು ಗುಮಾನಿಯಿಂದ ನೋಡುವ ಬದಲು ಅವರ ಜ್ಞಾನವನ್ನು ಸಮಾಜೋಪಯೋಗಿಯಾಗಿ ಮಾಡಿಕೊಳ್ಳಬೇಕಾಗಿದೆ. ಇವರಿಂದಾಗಿ ಗ್ರಾಮೀಣ ಪ್ರದೇಶದ ಬಡ ರೋಗಿಗಳಿಗೆ ತುಂಬ ಅನುಕೂಲವಿದೆ. ಆಧುನಿಕ ವೈದ್ಯರ ದುಬಾರಿ ಫೀಸು, ದುಬಾರಿ ಔಷಧ, ಒಂದರ ಅಡ್ಡ ಪರಿಣಾಮ ನಿವಾರಿಸಲು ಕೊಡುವ ಮತ್ತೊಂದು ಔಷಧಗಳು ಸಾಮಾನ್ಯರ ಕೈಗೆ ನಿಲುಕದಂತಾಗಿವೆ. ಅದಕ್ಕೆ ಬದಲಾಗಿ ನಾಡಿ ನೋಡಿ ಕೊಡುವ ನಾಟಿ ವೈದ್ಯ ಪದ್ಧತಿಯನ್ನು ಪ್ರೋತ್ಸಾಹಿಸಿದರೆ ಹೆಚ್ಚು ಪ್ರಯೋಜನವಾದೀತು. ಜಾನಪದ ವೈದ್ಯ ಕುರಿತು ಕುತೂಹಲಿಯಾಗಿದ್ದ ನಾನು ಕ್ಷೇತ್ರ ಕಾರ್ಯಕ್ಕೆ ಹೋದಾಗ ವೈದ್ಯರ ಪ್ರತಿಕ್ರಿಯೆ ಆಶಾದಾಯಕವಾಗಿರಲಿಲ್ಲ. ಅವರಲ್ಲಿ ಒಂದು ಬಗೆಯ ಭಯ ಆವರಿಸಿಕೊಂಡಿತ್ತು. ಮೊದಲ ಪರಿಚಯದಲ್ಲಿ ತಮ್ಮ ವಿವರ ಕೊಡಲು ಮುಂದೆ ಬರುತ್ತಿದ್ದವರು ಅನಂತರ ನಮ್ಮೊಂದಿಗೆ ಮಾತನಾಡಲು ಹಿಂಜರಿಯ ತೊಡಗಿದರು. ಕಾರಣ ಕೇಳಿದರೆ ಇವರ ವಿರುದ್ಧ ಆಧುನಿಕ ವೈದ್ಯರು ತಕರಾರು ತೆಗೆದಿರುವ ಸಂಗತಿ ತಿಳಿದು ಬಂತು. ಆಧುನಿಕ ವೈದ್ಯ ಹಾಗೂ ನಾಟಿ ವೈದ್ಯಗಳೆರಡರ ಉದ್ದೇಶ ಜನರ ಸ್ವಾಸ್ಥ್ಯ ಕಾಪಾಡುವುದೆ ಆಗಿದೆ. ಕಡಿಮೆ ಖರ್ಚಿನಲ್ಲಿ ಲಭ್ಯವಾಗುವ ಜಾನಪದ ಚಿಕಿತ್ಸೆ ಯಾವ ರೀತಿಯಿಂದಲೂ ದುಷ್ಪರಿಣಾಮಕಾರಿಯಲ್ಲ. ಗುಲಬರ್ಗಾ ಜಿಲ್ಲೆಯ ಕಾಳಗಿ ಮುಧೋಳ ಹಾಗೂ ಕಲಗರ್ತಿಗಳು ಮುರಿದ ಎಲುಬು ಕೂಡಿಸಿ ಕಟ್ಟಲು, ಗದ್ದಿಗಿ ಅಳ್ಳೊಳ್ಳಿ ಚರ್ಮರೋಗ ಹಾಗೂ ಎಚ್‌ಐವಿ ಚಿಕಿತ್ಸೆಗೆ, ಹಾಬಾಳ ಟಿ. ಕೀಲುನೋವು ಬಂಜೆತನ ನಿವಾರಣೆಗೆ, ಬಂದರವಾಡ ಹಾವು ಕಡಿತ ಹಾಗೂ ಅಸ್ತಮಾ ನಿವಾರಣೆಗೆ, ಮದಗುಣಕಿ ಕಾಮಾಲೆ ಔಷಧಕ್ಕೆ, ಬಂದರವಾಡ ಮಧುಮೇಹ ತೊನ್ನು ಹಾಗೂ ಫೇಪರಿ ನಿವಾರಣೆಗೆ, ಅರವಳ್ಳಿ ಮೂತ್ರಕೋಶದ ಹರಳು ನಿವಾರಣೆಗೆ, ಬಂದರವಾಡ ದನಗಳ ಕುಂದು ಹಾಗೂ ಕುಕ್ಕಡ ನಿವಾರಣೆಗೆ, ಬಸನಾಳ ಅಪೆಂಡಿಕ್ಸ ಹಾಗೂ ಲೈಂಗಿಕ ನಿಶ್ಶಕ್ತಿ ನಿವಾರಣೆಗೆ ಹೆಸರಾಗಿವೆ. ಪ್ರತಿ ಹಳ್ಳಿಯಲ್ಲಿ ಒಬ್ಬರಾದರೂ ಹಾವು ಕಡಿತಕ್ಕೆ- ಚೇಳು ಕಡಿತಕ್ಕೆ ಔಷಧ ಕೊಡುವವರಿದ್ದಾರೆ. ಕೃಷಿ ಕೆಲಸಗಳಲ್ಲಿ ತೊಡಗಿದ್ದಾಗ ಅನೇಕರು ಹಾವು ಕಡಿಸಿಕೊಳ್ಳುತ್ತಾರೆ. ಅಂಥವರು ಆಸ್ಪತ್ರೆಗೆ ಬಂದ ಉದಾಹರಣೆಗಳು ಕಡಿಮೆ. ಹಾವು ಕಡಿದ ವ್ಯಕ್ತಿ ನಿದ್ದೆ ಹೋಗಬಾರದೆಂದು ಇಡೀ ರಾತ್ರಿ ಭಜನೆ ಮಾಡುತ್ತ ಗ್ರಾಮಸ್ತರು ತಾವೂ ಎಚ್ಚರವಿರುವುದನ್ನು ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ನೋಡಬಹುದಾಗಿದೆ. ಶ್ರೀಮಂತರಲ್ಲದ ಜಾನಪದ ವೈದ್ಯರು ಸಾರ್ವಜನಿಕ ಸೇವೆಯಲ್ಲಿ ಮುಂದುವರಿಯಬೇಕೆಂದರೆ ಅವರ ಕೊರತೆಗಳನ್ನು ನಿವಾರಿಸಿ ಅನುಕೂಲ ವದಗಿಸಬೇಕು. ಯಾವುದೇ ಕಾರಣಕ್ಕೂ ಅವರ ಸೇವೆಯನ್ನು ಹಗುರವಾಗಿ ಭಾವಿಸಬಾರದು. ಪ್ರಸ್ತುತ ಸಂದರ್ಭ ಹಣದ ಹಿಂದೆ ಓಡುವಂಥದಾದರೂ ಜಾನಪದ ವೈದ್ಯರು ತಮ್ಮ ಪರಂಪರೆಯನ್ನು ಇಂದಿಗೂ ಕಾಯ್ದುಕೊಂಡು ಬಂದಿರುವುದನ್ನು ಗೌರವಿಸಬೇಕು ಎಂಬುದು ಈ ಅಧ್ಯಯನದ ಒತ್ತಾಯ ಹಾಗೂ ಕಾಳಜಿಯಾಗಿದೆ.

ಜನಪದ ವೈದ್ಯ ವಿಜ್ಞಾನದ ರಕ್ಷಣೆಗೆ ಡಾ. ಶಾಂತಿ ನಾಯಕ ನೀಡುವ ಸಲಹೆಗಳು ಹೀಗಿವೆ.

**ಜನಪದ ವೈದ್ಯಪದಕೋಶ ರಚನೆ :** ಈ ಶಬ್ದಗಳನ್ನು ಆಯಾ ನಾಡ ಮದ್ದುಗಾರರು ಹಾಗೂ ಮನೆ ಮದ್ದುಗಾರರಿಂದ ನೇರವಾಗಿ ಸಂಗ್ರಹಿಸಬೇಕು. ಜನಪದ ವೈದ್ಯಕ್ಕೆ ಸಂಬಂಧಿಸಿದ ಹಲವು ಸಾವಿರ ಪ್ರಾದೇಶಿಕ ಶಬ್ದಗಳಿಗೆ ಚಿತ್ರಸಹಿತ ಅರ್ಥ ನೀಡಲು ಪ್ರಯತ್ನಿಸಬೇಕು ಜೊತೆಗೆ ಆಧುನಿಕ ಹೆಸರನ್ನು ನೀಡಿ ಸಿದ್ಧಪಡಿಸಬೇಕು.

**ಜನಪದ ವೈದ್ಯ ವಿಶ್ವಕೋಶ ರಚನೆ** : ಜನಪದ ವೈದ್ಯರು ಬಲ್ಲ ಶಬ್ದಗಳನ್ನು ಆಧರಿಸಿ ಅವರು ನೀಡುವ ಮಾಹಿತಿ, ಮದ್ದು ತಯಾರಿಕಾ ಕ್ರಮ, ಅವರೇ ಹೇಳುವ ವೈದ್ಯ ಗುಣ ಹಾಗೂ ರೋಗ ಗುಣಗಳನ್ನು ದಾಖಲಿಸುವುದು. ವೈದ್ಯರ ಭಾವಚಿತ್ರ ಹಾಗೂ ಅಪೂರ್ವ ಅನುಭವಗಳು ಸೇರಿಕೊಳ್ಳಬೇಕು

**ಮಾಹಿತಿ ಕೋಶ** : ಮನೆ ಮದ್ದುಗಾರ(ರ್ತಿ)ರ ಮಾಹಿತಿ ಕೋಶ ಸಿದ್ಧ ಪಡಿಸುವುದು.

**ಉತ್ಕರ್ಷಕ್ಕೆ ಪ್ರಯತ್ನ :** ಜನಪದ ವೈದ್ಯರ ಇರು ನೆಲೆಯಲ್ಲೆ ರೋಗಿಗಳಿಗೆ ಉಪಯೋಗವಾಗುವಂತೆ ಅವರ ಉತ್ಕರ್ಷಕ್ಕೆ ಪ್ರಯತ್ನಿಸಬೇಕು. ಅವರಿರುವಲ್ಲಿ ಸರಕಾರಿ ಭೂಮಿ ಅಥವಾ ದಾನಿಗಳಿಂದ ಪಡೆದ ಭೂಮಿಯಲ್ಲಿ ಔಷಧ ಸಸ್ಯಗಳನ್ನು ಅರಣ್ಯ ಇಲಾಖೆಯ ಸಹಾಯದಿಂದ ಬೆಳೆಸಬೇಕು. ಪರಿಸರ ಇಲಾಖೆ ಇದಕ್ಕೆ ಕೈಜೋಡಿಸಬೇಕು. ಆಯಾ ಔಷಧ ಸಸ್ಯದ ಬಳಿ ಅಲ್ಲಿಯ ವೈದ್ಯರು ಸೂಚಿಸುವ ಪ್ರಾದೇಶಿಕ ಹೆಸರುಗಳ ನಾಮಫಲಕಬೇಕು. ಆ ಸಸ್ಯದ ಉಪಯೋಗ ಕುರಿತು ಒಂದೆರಡು ಶಬ್ದ ಬರೆಯಬೇಕು. ಈ ವನಗಳು ಪಾಳು ಬೀಳದಂತೆ ಎಚ್ಚರ ವಹಿಸಬೇಕು. ವಿದ್ಯಾರ್ಥಿಗಳ ಪಠ್ಯಕ್ರಮದಲ್ಲಿ ವನ ನಿರ್ವಹಣೆಯೂ ಸೇರಿಕೊಂಡಾಗ ಇವು ಜೀವಂತವಾಗಿರಬಹುದಾಗಿದೆ.

**ನಾಡ ವೈದ್ಯರ ಅಪೂರ್ವ ಜ್ಞಾನ ನಿರ್ವಹಣೆ** : ನಾಡ ವೈದ್ಯರ ಅಪೂರ್ವ ಜ್ಞಾನ ಕಂಪನಿಗಳ ಪಾಲಾಗದಂತೆ ವಕೀಲರ ಸಹಾಯದಿಂದ ಆಯಾ ಗ್ರಾಮ ಪಂಚಾಯತಿಯಲ್ಲಿ ದಾಖಲಿಸಬೇಕು. ಕಂಪನಿಗಳು ಇವರ ಜ್ಞಾನ ಬಳಸಿಕೊಂಡು ಲಾಭ ಮಾಡಿಕೊಂಡದ್ದು ತಿಳಿದು ಬಂದರೆ ಅವರಿಂದ ಲಾಭಾಂಶವನ್ನು ಜನಪದ ವೈದ್ಯರಿಗೆ ಕೊಡಿಸಬೇಕು. ಡಾ. ಸುದರ್ಶನ ಈ ಕೆಲಸ ಮಾಡಿದ್ದಾರೆ.

**ಕೊಂಡಿ ಯಾರು? ನಿಭಾಯಿಸುವುದು ಹೇಗೆ?**

ಜಾನಪದ ಅಕಾಡೆಮಿ, ಜಾನಪದ ಪರಿಷತ್ತು ಮತ್ತು ಜಾನಪದ ಉತ್ಥಾನದ ಗುರಿ ಹೊಂದಿರುವ ಸಂಸ್ಥೆಗಳು ಜನಪದ ವೈದ್ಯ ಶಿಕ್ಷಣವನ್ನು ಜಾರಿಗೊಳಿಸಬೇಕು. ಜನಪದ ವೈದ್ಯ ವನ ನಿರ್ಮಿಸಬೇಕು. ಜನಪದ ವೈದ್ಯ ಶಿಕ್ಷಣದಲ್ಲಿ ನಿರತರಾಗಿರುವ ವಿದ್ಯಾರ್ಥಿಗಳು ಇಲ್ಲಿಯ ವೈದ್ಯವನ ವೈದ್ಯರ ಮತ್ತು ವಿಶ್ವವಿದ್ಯಾಲಯ ಮುಂತಾದ ಸಂಸ್ಥೆಗಳ ನಡುವೆ ಕೊಂಡಿಗಳಂತೆ ಇರಬೇಕು. ಇವರು ನಿಗದಿತ ಪಠ್ಯಕ್ರಮದಂತೆ ವನದ ಮತ್ತು ವೈದ್ಯರ ಕುರಿತು ವರದಿಯನ್ನು ಸಿದ್ಧಪಡಿಸುವುದಲ್ಲದೆ ಅಲ್ಲಿ ಹೆಚ್ಚಿನ ಗಿಡ ನೆಡುವುದರ ಪ್ರಗತಿ ಮತ್ತು ಅಲ್ಲಿಗೆ ಬರುವ ರೋಗಿಗಳ ಅಭಿಪ್ರಾಯ ಪಡೆಯಬೇಕು. ಮನೆಮದ್ದುಗಾರರನ್ನು ಗುರುತಿಸಿ ಅವರ ಜ್ಞಾನ ಸಂಗ್ರಹಿಸಿ ತಾವು ಅಧ್ಯಯನ ಮಾಡುತ್ತಿರುವ ಸಂಸ್ಥೆಗೆ ಕರೆತಂದು ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಪರಿಚಯಿಸುವ ಮೂಲಕ ಕೊಂಡಿಯಾಗಿರಬೇಕು. ಅಂದರೆ ಪಠ್ಯಕ್ರಮದ ಮೂಲಕ ಕರ್ನಾಟಕದ ತುಂಬ ಈ ಸಂಸ್ಥೆಗಳು ವ್ಯಾಪಿಸಿಕೊಳ್ಳಬಹುದು.

ಶಾಂತಿ ನಾಯಕ ಅವರ ಈ ಸಲಹೆಗಳು ಅತ್ಯಮೂಲ್ಯವಾಗಿದ್ದು ಪ್ರಯೋಜನಕಾರಿಯಾಗಿವೆ. ನಮ್ಮ ಜಾನಪದ ವಿಶ್ವವಿದ್ಯಾಲಯದ ಮೂಲಕ ಇವು ಜಾರಿಗೊಳ್ಳುವಂತಾಗಲಿ ಎಂದು ಈ ಅಧ್ಯಯನವು ಒತ್ತಾಯಿಸುತ್ತದೆ.